**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,**
**ನ್ಯಾಯಾಲಯ,ಹೊಸದುರ್ಗ.**

**ಅಸಲು ದಾವಾ ಸಂಖ್ಯೆ 177/2017** **ದಿನಾಂಕಃ 17-02-2025**

**ಪಿ.ಡಬ್ಲ್ಯೂಃ2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : 2 ರಿಂದ 7 ನೇ ಪ್ರತಿವಾದಿಯರ ಪರ ಶ್ರೀ ಈ.ಪಿ ವಕೀಲರಿಂದ**

1. ನಾನು ಈ ದಾವೆಯ ಪ್ರತಿವಾದಿಯರ ವಿರುದ್ಧ ಒ.ಎಸ್.ನಂಃ175/2017 ಅನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ವಾರಸುದಾರರು ನನ್ನ ವಿರುದ್ದ ಒ.ಎಸ್.ನಂಃ67/2017 ಅನ್ನು ದಾಖಲಿಸಿದ್ದು ಅದು ಚಾಲ್ತಿಯಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೆ.ಎಸ್.ಬಸಪ್ಪ ತಂದೆ ಮುರಿಗ್ಯಪ್ಪ ಎಂದರೆ ನಾನೇ. ನಾನು ಒ.ಎಸ್.ನಂಃ175/2017 ಅನ್ನ ದಾಖಲಿಸಿ ರಾಜೀ ಆಗಿರುತ್ತದೆ ಎಂದು ವಾಪಸ್ಸು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ದಿಃ 09-09-2023 ರಂದು ನಾನು ಮೆಮೋ ಸಲ್ಲಿಸಿ ನಾನು ದಾವೆಯನ್ನು ಹಿಂಪಡೆದಿರುತ್ತೇನೆ ಎಂದರೆ ಸರಿ. **ಸಾಕ್ಷಿ ಸದರಿ ಮೆಮೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಡಿ-1 ಎಂದು ಹಾಗೂ ಆದೇಶ ಪುಟಗಳ ದೃಢೀಕೃತ ನಕಲನ್ನು ನಿ.ಡಿ-2 ಎಂದು ಗುರುತಿಸಲಾಯಿತು.**

2. ನಾನು ವಾದಿಯಿಂದ ಜಮೀನಿನ ದಾಖಲೆಗಳನ್ನು ಪರಿಶೀಲಿಸಿ ಖರೀದಿ ಮಾಡಿರುತ್ತೇನೆ. ನಾನು ವಾದಿಯಿಂದ ಖರೀದಿಗೆ ಪಡೆದ ಸಮಯದಲ್ಲಿ ಸರ್ವೆ ನಂಃ42/28 ರಲ್ಲಿ ವಾದಿಯ ಹೆಸರಿಗೆ ಇದ್ದ ಪಹಣಿ ರದ್ದಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಸರ್ವೆ ನಂಃ42 ರಲ್ಲಿ 2 ಎಕರೆ 9 ಗುಂಟೆ ವಾದಿಗೆ ಸೇರಿದ್ದು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನರಸಿಂಹಯ್ಯ

ಜೀವಿತ ಕಾಲದಲ್ಲಿ ಪ್ರತಿವಾದಿಯರ ತಾಯಿ ದೊಡ್ಡಕ್ಕ ಮತ್ತು ಆಕೆಯ ಮಗ ಕುಂಟೀರಪ್ಪ ಇವರಿಂದ ಖರೀದಿಸಿದ್ದು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

3. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರೇ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ಸ್ವಂತ ಊರು ಕಂಚೀಪುರ ಗ್ರಾಮ. ನಾನು ಪ್ರತಿವಾದಿಯರ ಜಮೀನು ನೋಡಿರುವುದಿಲ್ಲ ಎಂದರೆ ಸಾಕ್ಷಿಯು ಅದು ಗುಡ್ಡದ ಕೆಳಗೆ ಇರುತ್ತದೆ ಎಂದು ಉತ್ತರಿಸುತ್ತಾರೆ. ವಾದಿಗೆ ಸೇರಿದ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿಯರು ವಾದಿಯ ಸ್ವಾಧೀನಾನುಭವಕ್ಕೆ ತೊಂದರೆ ಮಾಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಇಂದಿಗೂ ಪ್ರತಿವಾದಿಯರೇ ಸ್ವಾಧೀನಾನುಭವದಲ್ಲಿ ಇದ್ದು ಕಂದಾಯ ವಗೈರೆ ಪಾವತಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಷರಿಕ್ಕಾಗಿ ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**